3. ಸರ್ಕಾರಿ ಕಾಲೇಜುಗಳು.

1. ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್.

2. ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.

3. ಎಸ್. ಕೆ. ಎಸ್. ಜೆ. ಟಿ. ಐ. ಬೆಂಗಳೂರು.

4. ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜ) ಬೆಂಗಳೂರು.

5. ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು, ಸೂರತ್ಕಲ್.

ಧಾರವಾಡ ಜಿಲ್ಲಾ ಪರಿಷತ್‌ನವರು ಔಷಧಿ ಖರೀದಿಗಾಗಿ ಖರ್ಚು ಮಾಡಿರುವ ಹಣ.

1661 - ಶ್ರೀ ಮಂಜುನಾಥ್. ಸಿ. ಕುನ್ನೂರ್, (ಶಿಂಗಾವ) : ಮಾನ್ಯ ಆರೋಗ್ಯ ಮತ್ತು ಕುಟುಂಬ , ಕಲ್ಯಾಣ ಸೆಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್‌ನಲ್ಲಿ ಆರೋಗ್ಯ ಸ್ಥಾಯಿ ಸಮಿತಿಯವರು ಔಷಧಿ ಖರೀದಿ ಹಾಗೂ ಇತರ ಸಾಮಗ್ರಿ ಖರೀದಿಗಾಗಿ 1989-90, 1990-91 ರಲ್ಲಿ ಎಷ್ಟು ಹಣ ಖರ್ಚು ಮಾಡಿರುವರು?

ಆ) ಸದರಿ ಖರೀದಿ ವ್ಯವಹಾರದಲ್ಲಿ ಜಿಲ್ಲಾ ಪರಿಷತ್ ನಿಂದಾಗಲಿ ಅಥವಾ ಸರ್ಕಾರದಿಂದ ಏನಾದರೂ ತನಿಕೆ ಆಗಿದೆಯೇ?

ಇ) ಹಾಗಿದ್ದಲ್ಲಿ ಈ ವರೆಗೆ ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಆರೋಗ್ಯ ಸಚಿವರು) :

ಅ) 1989-90 ರೂ. 76,09,973-00

1991-91 ರೂ. 39,50,068-00

ಆ) ಆಗಿರುತ್ತದೆ.

ಇ) ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತುಗೊಳಿಸಿತ್ತು ಹಾಗೂ ಅಡಿಷನಲ್ ರಿಜಿಸ್ಟ್ರಾರ್ ವಿಚಾರಣೆ-2, ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ. ವಿಚಾರಣೆ ನಡೆಯುತ್ತಿದೆ.

ಪಟ್ಟಣಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳಿಲ್ಲದಿರುವುದು.

1660 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಶಾಲಾ ಕಟ್ಟಡಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳುವಿರಿ?

ಇ) ಹಳ್ಳಿಗಳಲ್ಲಿಯ ಪ್ರಾಥಮಿಕ ಶಾಲೆಯ ಕಟ್ಟಡ ಹಾಗೂ ಪಟ್ಟಣಗಳಲ್ಲಿಯ ಪ್ರಾಥಮಿಕ ಶಾಲೆಯ ಕಟ್ಟಡಕ್ಕೆ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪಟ್ಟಣ ಪ್ರದೇಶಗಳಲ್ಲಿಯ ಪ್ರಾಥಮಿಕ ಶಾಲಾ ಕೊಠಡಿಗಳ ಕಟ್ಟಡಗಳಿಗಾಗಿ ಹಣ ಒದಗಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಧಾರವಾಡ ಜಿಲ್ಲೆಯಲ್ಲಿ ಬಸ್ ಡಿಪೋಗಳ ಸಂಖ್ಯೆ

1859 - ಶ್ರೀ ಮಂಜುನಾಥ ಸಿ.ಕುನ್ನೂರ (ಶಿಗ್ಗಾಂವ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಕೆಎಸ್ಆರ್‌ಟಿಸಿ ಬಸ್ ಡಿಪೋಗಳಿವೆ?

ಆ) ಪ್ರತಿಯೊಂದು ಡಿಪೋಗಳಿಂದ 1987ರಿಂದ ಈವರೆಗೆ ಪ್ರತಿವರ್ಷ ಆದ ಲಾಭ ನಷ್ಟ ಎಷ್ಟು?

ಇ) ಜಿಲ್ಲೆಯ ಇನ್ನು ಎಷ್ಟು ನಗರಗಳಲ್ಲಿ ಬಸ್‌ಡಿಪೋ ಪ್ರಾರಂಭಿಸುವ ಅವಶ್ಯಕತೆ ಇದೆ?

ಈ) ಅವುಗಳಲ್ಲಿ ಶಿಗ್ಗಾಂವ ನಿಲ್ದಾಣದ ನಗರಗಳಲ್ಲಿ ಬಸ್ ಡಿಪೋ ಪ್ರಾರಂಭಿಸುವ ವಿಚಾರ ಇದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) 8 ಡಿಪೋಗಳಿರುತ್ತವೆ.

ಆ) 1987-88 ರಿಂದ 1990-91ರ ವರೆಗಿನ ಡಿಪೋವಾರು ಲಾಭನಷ್ಟದ ವಿವರಗಳು ಈ ಕೆಳಕಂಡಂತಿರುತ್ತದೆ.

ಡಿಪೋಗಳು	1987-88	1988-89	1989-90	1990-91
ಹುಬ್ಬಳ್ಳಿ (ಗ್ರಾಮಾಂತರ)	+44.17	+21.62	–34.10	+14.61
ಹುಬ್ಬಳ್ಳಿ (ಸಿಟಿ)	–52.31	–69.71	–158.58	–106.41
ಧಾರವಾಡ	–32.62	–34.93	–112.61	–63.98
ಗದಗ್	+18.66	+0.56	–60.01	–1.67
ಹಾವೇರಿ	+10.84	+11.76	–41.21	–14.53
ಹಿರೇಕೆರೂರು	+50.30	+33.22	–19.57	+20.01
ರೋಣ್	+21.20	+3.93	–18.70	+9.25
ಲಕ್ಷ್ಮೇಶ್ವರ	+24.49	+23.06	–7.93	+29.86

ಇ) ನರಗುಂದ, ಹುಬ್ಬಳ್ಳಿ ನಗರ ಮತ್ತು ರಾಣೆಬೆನ್ನೂರುಗಳಲ್ಲಿ ಇನ್ನು ಅಧಿಕ ಡಿಪೋಗಳ ಅವಶ್ಯಕತೆ ಇರುತ್ತದೆ.

ಈ) ಇಲ್ಲ.

ರಾಜ್ಯಗಳಲ್ಲಿರುವ ದೈಹಿಕ ಶಿಕ್ಷಕರ ತರಬೇತಿ ಕೇಂದ್ರಗಳು

1648 - ಶ್ರೀ ಎಚ್.ಎಸ್. ಪಾಟೀಲ್ (ಕುಷ್ಟಗಿ): ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಮಹಾವಿದ್ಯಾಲಯಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)